# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ, ಮಹದೇವಪುರ ವಲಯ ಬೆಂಗಳೂರು-43.

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/ /2022-23 ದಿನಾಂಕ: 17.12.2022

***ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-17.12.2022 ರಂದು ಹೊರಮಾವು ಉಪ-ವಿಭಾಗದ ಕಲ್ಕೆರೆ ವಾರ್ಡ್-83, ರಾಮಮೂರ್ತಿನಗರ -84 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.***

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊ.ನಂ |
|---|---|---|---|
| 1 | ಶ್ರೀ.ಬಸವ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-83 | |
| 2 | ಶ್ರೀ. ರಮೇಶ್ | ಸಹಾಯಕ ಅಭಿಯಂತರರು/ವಾರ್ಡ್ ನೊಡೆಲ್ ಅಧಿಕಾರಿ | 9480685868 |
| 3 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| | | ಸಾರ್ವಜನಿಕರು | |
| 4 | ಶ್ರೀ ತಂಗದೊರೈ, | ಲೇಕ್ ವ್ಯೂ ಗಾರ್ಡನ್, ಕೆ.ಚನ್ನಸಂದ್ರ ವಾರ್ಡ್ ನಂ.83 | - |
| 5 | ಶ್ರೀ.ಅರುಣಗಿರಿ | (ವಿನಾಯಕ ಬಡಾವಣೆ) ಕೆ.ಚನ್ನಸಂದ್ರ ವಾರ್ಡ್ ನಂ.83 ಪುಣ್ಯಭೂಮಿ | - |
| 6 | ಶ್ರೀ.ವೆಂಕಟಾಚಲಕುರಿ, | ಕಲ್ಕೆರೆ, ರಿಚ್ಚಸ್ ಗಾರ್ಡನ್ ವಾರ್ಡ್ ನಂ.83 | - |
| 7 | ಶ್ರೀಮತಿ.ರಾಜೇಶ್ವರಿ, | ದಾಸಪ್ಪ ಬಡಾವಣೆ ವಾರ್ಡ್ ನಂ.84 ಬಂಜಾರ ಬಡಾವಣೆ | - |
| 8 | ಶ್ರೀ.ನಂಜಪ್ಪ ಸರ್.ಎಂ.ವಿ.ನಗರ ವೆಲ್‌ಫೇರ್ ಅಸೋಸಿಯೇಷನ್ | ಸರ್.ಎಂ.ವಿ.ನಗರ ವೆಲ್‌ಫೇರ್ ಅಸೋಸಿಯೇಷನ್ ವಾರ್ಡ್ ನಂ.84 | - |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.83 ಮತ್ತು ವಾರ್ಡ್ ನಂ.84 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ಪು.ತಿ.ನೋ

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

**ಶ್ರೀ ತಂಗದೊರೈ, ಲೇಕ್ ವ್ಯೂ ಗಾರ್ಡನ್, ಕೆ.ಚನ್ನಸಂದ್ರ ವಾರ್ಡ್ ನಂ.83 :-** ರವರು ಮಾತನಾಡಿ, ಕೆ.ಚನ್ನಸಂದ್ರ ವೃತ್ತದಿಂದ ರಾಮಮುರ ಕೆರೆವರೆಗೆ ರಸ್ತೆ ಬದಿಯ ಚರಂಡಿ ನಿರ್ಮಿಸಲು ಮತ್ತು ರಸ್ತೆ ಡಾಂಬರೀಕರಣ ಮಾಡಲು ಹಾಗೂ ಕೆ.ಚನ್ನಸಂದ್ರ ಗ್ರಾಮದಿಂದ ರಾಮಮುರ ಕೆರೆವರೆಗೆ ಲೇಕ್‌ವ್ಯೂ ಗಾರ್ಡನ್ ಒಳಭಾಗ ಹಾಗೂ ಮುಖ್ಯ ರಸ್ತೆಯಲ್ಲಿ 3 ಕಡೆಯಿಂದ ಮಳೆ ನೀರಿನ ಚರಂಡಿಗಳು ಬಂದು ಕೆರೆಗೆ ಸಂಪರ್ಕ ಕಲ್ಪಿಸುತ್ತಿದ್ದು, ಇವುಗಳನ್ನು ನಿರ್ಮಿಸಿಕೊಡಲು ಕೋರಿಕೊಂಡಿರುತ್ತಾರೆ. ಹಾಗೂ ಒಂದು ಕುಡಿಯುವ ನೀರಿಗಾಗಿ ಹೊಸದಾಗಿ ಕೊಳವೆಬಾವಿ ಕೊರೆದುಕೊಡಲು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ವಾರ್ಡ್ ನಂ.83, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳ ವಿಭಾಗ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆರೆಗಳ ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಅರುಣಗಿರಿ (ವಿನಾಯಕ ಬಡಾವಣೆ) ಕೆ.ಚನ್ನಸಂದ್ರ ವಾರ್ಡ್ ನಂ.83:-** ರವರು ಮಾತನಾಡಿ, ವಿನಾಯಕ ಬಡಾವಣೆಯಲ್ಲಿ ಎಲ್ಲಾ ಅಡ್ಡರಸ್ತೆಗಳಲ್ಲಿ ಆರ್.ಸಿ.ಸಿ ಚರಂಡಿಗಳನ್ನು ನಿರ್ಮಿಸಿ, ರಸ್ತೆ ಅಭಿವೃದ್ಧಿ ಪಡಿಸಲು ಹಾಗೂ ಒಂದು ಕುಡಿಯುವ ನೀರಿಗಾಗಿ ಹೊಸದಾಗಿ ಕೊಳವೆಬಾವಿ ಕೊರೆದುಕೊಡಲು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.83 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ವೆಂಕಟಾಚಲಕುರಿ, ಕಲ್ಕೆರೆ, ರಿಚ್ಚಸ್ ಗಾರ್ಡನ್ ವಾರ್ಡ್ ನಂ.83:-** ರವರು ಮಾತನಾಡಿ, ಕಲ್ಕೆರೆ ಕೃಷ್ಣ ಮೆಡೋಸ್ ಅಪಾರ್ಟ್‌ಮೆಂಟ್ ಬಳಿ ಕಲ್ವರ್ಟ್ ನಿರ್ಮಿಸಲು ರಿಚ್ಚಸ್ ಗಾರ್ಡನ್ ಉಳಿದ ಅಡ್ಡರಸ್ತೆಯಲ್ಲಿ ಆರ್.ಸಿ.ಸಿ ಚರಂಡಿಗಳನ್ನು ನಿರ್ಮಿಸಲು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.83 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀಮತಿ.ರಾಜೇಶ್ವರಿ, ದಾಸಪ್ಪ ಬಡಾವಣೆ ವಾರ್ಡ್ ನಂ.84:-** ರವರು ಮಾತನಾಡಿ, ರಾಮಮೂರ್ತಿನಗರ ಮುಖ್ಯರಸ್ತೆಯಲ್ಲಿ ದಾಸಪ್ಪ ಬಡಾವಣೆ ಬೇಕರಿ ಬಳಿ ಪಾದಚಾರಿ ಕಲ್ಲು ಮುರಿದು ಹೋಗಿದ್ದು, ತುರ್ತಾಗಿ ಅಳವಡಿಸಿಕೊಡಲು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.83 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ನಂಜಪ್ಪ ಸರ್.ಎಂ.ವಿ.ನಗರ ವೆಲ್‌ಫೇರ್ ಅಸೋಸಿಯೇಷನ್ ವಾರ್ಡ್ ನಂ.84:-** ರವರು ಮಾತನಾಡಿ, ಸರ್.ಎಂ.ವಿ ನಗರ 18, 19, 20, 21ನೇ ಅಡ್ಡರಸ್ತೆಯಲ್ಲಿ ರಸ್ತೆ ಅಭಿವೃದ್ಧಿ ಮಾಡಿ ಡಾಂಬರೀಕರಣ ಮಾಡಲು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.84 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ದಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

ಶ್ರೀ. ರಮೇಶ್
**ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ-83**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ**
**ಸಹಾಯಕ ಅಭಿಯಂತರರು ರಾಮಮೂರ್ತಿನಗರ ವಾರ್ಡ್ ಸಂಖ್ಯೆ-83**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಪ್ರತಿಯನ್ನು:-

**1.ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಲಾಗಿದೆ.**
**2.ಕಛೇರಿ ಪ್ರತಿ.**